ಶ್ರೀ ಸಿದ್ದರಾಮಯ್ಯ: Council of Ministers ಅಂದರೆ collective responsibility ಇಲ್ಲವೇ?

ಅಧ್ಯಕ್ಷರು: ಇದೆ, ಅವರು ಸಲಹೆ ಕೊಟ್ಟಿದ್ದಾರೆ ಅಷ್ಟೇ. ಇದರ ಬಗ್ಗೆ ಮತ್ತೆ ಚರ್ಚೆ ಬೇಡ.

ಶ್ರೀ ಅಭಯಚಂದ್ರ ಜೈನ್: ಅಲ್ಲಿ ಕ್ಲಿನಿಕ್ ಇದ್ದರೆ ಒಂದು waiting room, ಒಂದು ಕೋಣೆ ಅಷ್ಟೇ ಇರುತ್ತದೆ. ಅಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡುವುದು ಬಹಳ ಕಷ್ಟ. ಬಾಡಿಗೆ ಕೊಠಡಿಗಳನ್ನು ತೆಗೆದುಕೊಂಡು ಇವತ್ತು ಕ್ಲಿನಿಕ್ ಅನ್ನು ಅವರು ನಡೆಸುವುದರಿಂದಾಗಿ ಇಲ್ಲಿ ಕಡ್ಡಾಯವಾಗಿ ಶೌಚಾಲಯಗಳನ್ನು ಮಾಡುವುದು ಕಷ್ಟವಿದೆ. ಆದ್ದರಿಂದ ಸ್ವಲ್ಪ relaxation ಕೊಡಬೇಕೆಂದು ನಮ್ಮ ಕಳಕಳಿಯ ವಿನಂತಿ.

ಅಧ್ಯಕ್ಷರು: ಅಭಯಚಂದ್ರರವರೇ, ನಿಮ್ಮದೇ ಶೂನ್ಯವೇಳೆ ಪ್ರಸ್ತಾಪ ಮಾಡಿ. ಯು.ಟಿ. ಖಾದರ್ ಕುಳಿತುಕೊಳ್ಳಿ.

ಶ್ರೀ ಯು.ಟಿ. ಖಾದರ್: ನಾವಿಬ್ಬರೂ ಜೊತೆಯಲ್ಲಿ ಹಾಕಿದ್ದೇವೆ ಅಧ್ಯಕ್ಷರೆ.

(ಆ) ವಿಷಯ: **ONGC ಸಂಸ್ಥೆಯಿಂದ ಮಂಗಳೂರಿನ ಸಂಬಂಧಪಟ್ಟ ಜನರಿಗೆ ಉದ್ಯೋಗಾವಕಾಶ ಅಥವಾ ಆರ್ಥಿಕ ನೆರವು ನೀಡುವ ಬಗ್ಗೆ.**

ಶ್ರೀ ಯು.ಟಿ. ಖಾದರ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ONGC ಸಂಸ್ಥೆಗೆ ಬಹುಶಃ 2315 ಎಕರೆಯಷ್ಟು ಜನ ಸಾಮಾನ್ಯರ ಜಮೀನನ್ನು ಸರ್ಕಾರ ಸ್ವಾಧೀನಪಡಿಸಿಕೊಂಡು ಕೊಟ್ಟಿದೆ. ಅಲ್ಲಿ ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಅವರು ಅಲ್ಲಿ ಹೇಳಿದ್ದಾರೆ, ಯಾರು ಜಾಗವನ್ನು ಕಳೆದುಕೊಳ್ಳುತ್ತಾರೋ ಆ ನಿರಾಶ್ರಿತರಿಗೆ ಅವರ ಮನೆಯವರಿಗೆ ಉದ್ಯೋಗವನ್ನು ಕೊಡುವುದಾಗಿ ಹೇಳಿದ್ದಾರೆ. ಬಹುಶಃ ಬೇರೆ ಬೇರೆ ಕಡೆ

ಸಣ್ಣ ಪುಟ್ಟ ಕೆಲಸ ಮಾಡುತ್ತಿದ್ದ 400 ಜನಗಳಿಗೆ ವಿದೇಶದಲ್ಲಿದ್ದವರು ಬಂದು ತರಬೇತಿಯನ್ನು ಕೊಟ್ಟು ಇವತ್ತು ಎರಡು ವರ್ಷಗಳಾದರೂ ಕೇವಲ 40 ಜನರಿಗೆ ಮಾತ್ರ ಕೆಲಸವನ್ನು ಕೊಟ್ಟಿದ್ದಾರೆ, ಉಳಿದವರಿಗೆ ಕೆಲಸ ಕೊಡುವಂಥ ವ್ಯವಸ್ಥೆಯಾಗಲಿಲ್ಲ. ಅದರ ಜೊತೆಗೆ ಡೈರೆಕ್ಟ್ ಆಗಿ ತೆಗೆದುಕೊಂಡಿದ್ದವರದು ಬಾಕಿ ಇದೆ. ಅವರೆಲ್ಲರೂ ಕೂಡ ಇವತ್ತು ಮಂಗಳೂರಿನಲ್ಲಿ ಧರಣಿ ಕುಳಿತುಕೊಂಡು ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಆದಕಾರಣ ಇಂಥ ವಿಷಯಗಳು ನಮ್ಮ ಗಮನಕ್ಕೆ ಬರುತ್ತದೆ. ಬೇರೆ ಬೇರೆ ಕಡೆಗಳಿಂದ ತೆಗೆಯುತ್ತಿದ್ದಾರೆಂಬ ವಿಷಯ ನಮ್ಮ ಗಮನಕ್ಕೆ ಬರುತ್ತಿವೆ. ಬಹುಶಃ ಯಾರು ಇವತ್ತು ಆ ಜಾಗವನ್ನು ಕಳೆದುಕೊಂಡಿದ್ದಾರೆ. ಅವರಿಗೆ ಉದ್ಯೋಗ ಕೊಡುವಂಥದ್ದಕ್ಕೆ ಸರ್ಕಾರ ತಕ್ಷಣ ಮಧ್ಯೆ ಪ್ರವೇಶಿಸಿ ತಕ್ಷಣ ಅವರಿಗೆ ಉದ್ಯೋಗವನ್ನು ಕೊಡಬೇಕು. ಬಹುಶಃ ಉದ್ಯೋಗವಿಲ್ಲದಿದ್ದರೆ ಸ್ಟೈಪೆಂಡ್ ಆಗಿ ತಿಂಗಳಿಗೆ ಇಷ್ಟು ಅನುದಾನವನ್ನಾದರೂ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಅಭಯಚಂದ್ರ ಜೈನ್: ಮಂಗಳೂರಿನಲ್ಲಿರುವ 2315 ಎಕರೆ ಜಾಗವನ್ನು acquire ಮಾಡಿ ONGC ಸಂಸ್ಥೆಗೆ ಕೊಡಲಾಗಿದೆ. ಆ ರೀತಿ acquire ಮಾಡಿದಾಗ ಭೂಮಿಯನ್ನು ಕಳೆದುಕೊಂಡಿರುವವರಿಗೆ ಉದ್ಯೋಗವನ್ನು ಕೊಡುತ್ತೇವೆಂಬ ಭರವಸೆಯನ್ನು ONGC company ಕೊಟ್ಟಿದೆ. ಇವತ್ತೇನಾಗಿದೆ, KPT 430 ಜನ ವಿದ್ಯಾರ್ಥಿಗಳಿಗೆ ತರಬೇತಿಯನ್ನು ಕೊಟ್ಟಿದೆ.

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಇವೆಲ್ಲಾ ಬರುವುದಿಲ್ಲ. ಇಬ್ಬಿಬ್ಬರು ಹೇಳುವುದಕ್ಕೆ ಬರುವುದಿಲ್ಲ. ಇತ್ತೀಚಿನ ಘಟನೆಯನ್ನು ನೀವು ಇಬ್ಬರೂ ಹೇಳಿದರೆ ಆಗುತ್ತದೆಯೇ ? ಸಚಿವರು ಉತ್ತರ ಹೇಳಿ. ಇದು ಶೂನ್ಯವೇಳೆಗೆ ಬರುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಮಂಗಳೂರು S.E.Z. ಯೋಜನೆಯಿಂದ ಸುಮಾರು 1661 ಕುಟುಂಬಗಳು ಸಂತ್ರಸ್ತ ಕುಟುಂಬಗಳಾಗಿವೆ. ಇದರಲ್ಲಿ ಸುಮಾರು 590 ಕುಟುಂಬಗಳು ನಮಗೆ ಯಾವುದೇ ಉದ್ಯೋಗಾವಕಾಶ ಬೇಡ, ನಮಗೆ ಆರ್ಥಿಕ ಸೌಲಭ್ಯ ಕೊಡಿ ಎಂದು ಕೇಳಿದಾಗ ಅವರಿಗೆ ಸೂಕ್ತವಾಗಿ ಹಣವನ್ನು ಕೊಟ್ಟಿದ್ದೇವೆ. ಇನ್ನು 766 ಸಂತ್ರಸ್ತರು ನಮಗೆ ಉದ್ಯೋಗಾವಕಾಶ ಬೇಕು ಎಂದು ಕೇಳಿಕೊಂಡಿದ್ದಾರೆ. ಈಗಾಗಲೇ 411 ಸಂತ್ರಸ್ತ ಕುಟುಂಬದ ಸದಸ್ಯರಿಗೆ ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು ಇವರ ಮೂಲಕ ಬೇರೆ ಬೇರೆ ರೀತಿಯ ತರಬೇತಿಯನ್ನು ಕೊಟ್ಟು ಅದಕ್ಕೋಸ್ಕರ ಸುಮಾರು 4.00 ಕೋಟಿ ರೂಪಾಯಿಗಳ ವೆಚ್ಚ ಕೂಡ ಮಾಡಲಾಗಿದೆ. ಈಗ 87 ಜನಕ್ಕೆ ಉದ್ಯೋಗ ಕೊಟ್ಟಿದೆ. ಇದರಲ್ಲಿ 42 ಜನ ಯಾರು ಪಾಲಿಟೆಕ್ನಿಕ್‌ನಿಂದ ತರಬೇತಿಯನ್ನು ತೆಗೆದುಕೊಂಡಿದ್ದರು. ಅವರಿಗೆ ಈಗ ತರಬೇತಿಯನ್ನು ಕೊಟ್ಟಿದೆ. ಉಳಿದ 411 ಜನರಲ್ಲಿ 223 ಜನ ಈಗ ತರಬೇತಿಯಲ್ಲಿದ್ದಾರೆ. ತರಬೇತಿ ಮುಕ್ತಾಯದ ಹಂತದಲ್ಲಿದ್ದು ಅವರಿಗೂ ಮುಂದೆ ನಾವು ಉದ್ಯೋಗ ಕೊಡುತ್ತೇವೆ. ಈ ವಿಚಾರದಲ್ಲಿ 29.1.2011 ಮತ್ತು 28.2.2011ರಂದು ಆ ಕ್ಷೇತ್ರದ ಚುನಾಯಿತ ಪ್ರತಿನಿಧಿಗಳು ಅದರಲ್ಲಿ ಅಭಯಚಂದ್ರ ಜೈನ್‌ರವರು ಕೂಡ ಇದ್ದರು. ಚುನಾಯಿತ ಪ್ರತಿನಿಧಿಗಳು, MRPL, M.S.E.Z. ಮತ್ತು ಸಂತ್ರಸ್ತ ಕುಟುಂಬಗಳ ಒಂದು ಸಮಿತಿ ಇವರೆಲ್ಲಾ ಒಂದು ಸಭೆ ಸೇರಿ ಆ ಸಂತ್ರಸ್ತ ಕುಟುಂಬದವರಿಗೆ ಉದ್ಯೋಗ ಕೊಡುವುದು ಮತ್ತು package ಬಗ್ಗೆ ವಿವರವಾದ ಕ್ರಿಯಾ ಯೋಜನೆಯನ್ನು ಇವತ್ತು ತಯಾರಿಸಬೇಕೆಂದು ತೀರ್ಮಾನ ತೆಗೆದುಕೊಂಡಿದೆ, ಯಾವುದೇ ರೀತಿ ಸಂತ್ರಸ್ತರಿಗೆ ತೊಂದರೆಯಾಗದೆ ಇರುವ ರೀತಿಯಲ್ಲಿ, ಅವರು ಬೀದಿ ಪಾಲಾಗದೆ ಇರುವ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು: ಶ್ರೀ ಪುಟ್ಟರಾಜು ಪ್ರಸ್ತಾಪ ಮಾಡಿ.

ಶ್ರೀ ಯು.ಟಿ. ಖಾದರ್: ಅಧ್ಯಕ್ಷರೆ, ಸರ್ಕಾರದಿಂದ ಭರವಸೆಯನ್ನು ಕೊಡಬೇಕು.

ಅಧ್ಯಕ್ಷರು: ಇದು ಶೂನ್ಯವೇಳೆಗೆ ಬರುವುದಿಲ್ಲ. ನಿಮ್ಮ informationಗೆ ಹೇಳಿದ್ದೇನೆ. ನಾನು ಪುಟ್ಟರಾಜುರವರನ್ನು ಕರೆದಿದ್ದೇನೆ.

ಶ್ರೀ ಯು.ಟಿ. ಖಾದರ್: ಸರ್ಕಾರ ಇದಕ್ಕೆ ಸ್ಪಂದನೆ ಮಾಡಬೇಕು. ಸೂಕ್ತವಾದ ಭರವಸೆಯನ್ನು ಕೊಟ್ಟರೆ ಬಹುಶಃ ಅವರಿಗೆ withdraw ಮಾಡಬಹುದು, ತಾವು ಒಂದು ಮಾತು ಹೇಳಿದರೆ ಆಗುತ್ತದೆ.

ಶ್ರೀ ಎಸ್. ಸುರೇಶ್‌ಕುಮಾರ್: ಈಗ ಭರವಸೆಯನ್ನು ಕೊಟ್ಟಿದ್ದೇವೆ. ತರಬೇತಿಯನ್ನು ಕೊಡುತ್ತಿದ್ದೇವೆ. ಅವರಿಗೆ ಆರ್ಥಿಕ ಸೌಲಭ್ಯವನ್ನು ಕೊಡುತ್ತಿದ್ದೇವೆ. ಈಗಾಗಲೇ ಸಭೆ ಕೂಡ ನಡೆದಿದೆ. ಅಭಯಚಂದ್ರರವರು ಆ ಸಭೆಯಲ್ಲಿ ಭಾಗವಹಿಸಿದ್ದಾರೆ. ಅವರೇ ಆ ಪ್ರತಿಭಟನಾಕಾರರಿಗೆ ಭರವಸೆಯನ್ನು ಕೊಡಬಹುದು. ಯಾರಿಗೂ ಕೂಡ ಅನ್ಯಾಯವಾಗದಿರುವಂತೆ ಅವರಿಗೆ ಉದ್ಯೋಗವನ್ನು ಕೊಡುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಶ್ರೀ ಸಿ.ಎಸ್. ಪುಟ್ಟರಾಜು.

(ಇ) **ವಿಷಯ: ಮೈಸೂರು–ನಂಜನಗೂಡಿನ ಉಂಡಬತ್ತಿನ ಕೆರೆಯ ಬಳಿ ನಡೆದ ಟೆಂಪೋ ದುರಂತದ ದುರ್ಘಟನೆಯಲ್ಲಿ ಮಡಿದವರಿಗೆ ಪರಿಹಾರ ನೀಡುವ ಬಗ್ಗೆ.**

ಶ್ರೀ ಸಿ.ಎಸ್. ಪುಟ್ಟರಾಜು (ಮೇಲುಕೋಟೆ): ಮೈಸೂರು ನಂಜನಗೂಡಿನ ಉಂಡಬತ್ತಿನ ಕೆರೆಯ ಬಳಿ ನಡೆದ ಟೆಂಪೋ ದುರಂತದ ಘಟನೆ ಇಡೀ ರಾಜ್ಯವನ್ನೇ ತಲ್ಲಣಗೊಳಿಸಿರುವಂಥ ವಿಚಾರ. ಸಂಬಂಧಪಟ್ಟ ಗ್ರಾಮದ 31 ಜನ ಆ ಸ್ಥಳದಲ್ಲಿ ಅಸು ನೀಗಿರುವ ಸಂದರ್ಭದಲ್ಲಿ ಈ ಘಟನೆ ನಡೆದಾಗ ನಮ್ಮ ವಿರೋಧ ಪಕ್ಷದ ನಾಯಕರು, ಹಾಗೂ ಮಾಜಿ